
ಸರಿ, ಇವರ ಪ್ರಯತ್ನದಿಂದ ಒಂದೊಂದಾಗಿ ಆರೆಂಜ್‌ಸೋಡಾ, ಸ್ಪೆಷಲ್ ನಿಂಬೂಸೋಡಾ, ಲೈಮ್ ಜ್ಯೂಸ್, ಕ್ರಷ್, ದ್ರಾಕ್ಷಿ ಕ್ರಷ್, ಬಾದಾಮ್ ಹಾಲು, ಹೊಟ್ಟೆ ನೋವಿಗೆ ಜಿಂಜರ್ ಸೋಡಾ ಮುಂತಾದವು ಇವರ ಬತ್ತಳಿಕೆಯಲ್ಲಿ ಸೇರಿಕೊಂಡವು.

ಮಿಕ್ಕ ಎಲ್ಲಾ ಸೋಡಾಗಳು ಒಂದು ಕಡೆಯಾದರೆ, ಜಿಂಜರ್ ಸೋಡಾದಿಂದಾಗಿ ಚಂದ್ರಣ್ಣ ಅಲ್ಲಿಯ ಹೆಂಗಸರಿಗೆ ಆಪದ್ಬಾಂಧವನಾಗಿಬಿಟ್ಟ. ಅವರಿಗೆ ಯಾವಯಾವುದೋ ಕಾರಣದಿಂದ ಬರುವ ಹೊಟ್ಟೆನೋವುಗಳಿಗೆ ಒಂದು ಜಿಂಜರ್ ಸೋಡಾ ಔಷಧಿಯಂತೆ ಕೆಲಸ ಮಾಡುತ್ತಿತ್ತು.




ಹೀಗೆ ಚಂದ್ರಣ್ಣನ ವ್ಯಾಪಾರ ಚೆನ್ನಾಗಿ ನಡೆಯುತ್ತಿತ್ತು. ಇದರಿಂದಾಗಿ ದೇಶಭಕ್ತರಿಗೆ ಚಂದ್ರಣ್ಣನ ನೆರವೂ ಹೆಚ್ಚಾಯಿತು. ಈ ಸಮಯದಲ್ಲೇ ಗಾಂಧೀಜಿಯವರ ಖಾದೀ ಚಳವಳಿ ದಕ್ಷಿಣಭಾರತಕ್ಕೂ ಹಬ್ಬಿತು. ಅಲ್ಲಿಯವರೆಗೆ ಚಂದ್ರಣ್ಣ, "ರಾಷ್ಟ್ರ ಸ್ವತಂತ್ರವಾದರೆ ಸಾಕು, ಎಲ್ಲರಿಗೂ ಒಳ್ಳೆಯದಾಗುತ್ತದೆ" ಅಂದುಕೊಂಡಿದ್ದ. ಆದರೆ ಈ ಖಾದೀ ಚಳವಳಿಯಿಂದಾಗಿ ಚಂದ್ರಣ್ಣನಿಗೆ ಅರ್ಥವಾಗಿದ್ದೇನೆಂದರೆ, ಸ್ವಾತಂತ್ರ್ಯ ಬರಲಿ, ಬಿಡಲಿ, ವ್ಯಾಪಾರ ವಹಿವಾಟಿನ ಹೆಸರಲ್ಲಿ ಈ ಜನರ ದುಡಿಮೆಯನ್ನು ಈ ನೆಲದ ಸಂಪತ್ತನ್ನು ದೋಚಿಕೊಂಡು ಹೋಗಲು ಬಿಳಿಯರು ಎಲ್ಲಾ ತಯಾರಿ ಮಾಡಿಕೊಂಡಿದ್ದಾರೆಂದು ಸ್ಪಷ್ಟವಾಯಿತು.

ಚಂದ್ರಣ್ಣ, "ನಮ್ಮ ತಕ್ಷಣದ ಕರ್ತವ್ಯ – ಸ್ವದೇಶಿ ಚಳವಳಿ" ಎಂಬ ಬರಹದ ರಟ್ಟನ್ನು ಬಾಗಿಲಮೇಲೆ ಕಟ್ಟಿದ. ಮನೆಯಲ್ಲಿದ್ದ ವಿದೇಶಿ ವಸ್ತುಗಳೆಲ್ಲವನ್ನು ಅಂಗಡಿಯ ಮುಂದೆ ಹಾಕಿ ಬೆಂಕಿಯಿಟ್ಟು ಬಿಟ್ಟ.

ಆನಂತರ ಚಂದ್ರಣ್ಣ ಜೀವನದಲ್ಲೆಂದೂ ವಿದೇಶಿ ವಸ್ತ್ರ ಉಡಲಿಲ್ಲ.

ಮದರಾಸಿನಲ್ಲಿ ಜ್ಯೂಸು, ಸೋಡಾಗಳ ಎಸೆನ್ಸುಗಳನ್ನು ಬಹಳ ಪರೀಕ್ಷೆ ಮಾಡಿ ಕೊಂಡುತರುತ್ತಿದ್ದ. ಆದರೆ ಅವನಿಗೆ ಅಲ್ಲಿ ಒಂದು ವಿಷಯ ಸೋಜಿಗವೆನಿಸಿತ್ತು. ಅದು ವಿದೇಶೀ ಪಾನೀಯಗಳ ಮೇಲೆ ಜನರಿಗೆ ಬೆಳೆದಿದ್ದ ಪ್ರೀತಿ. ಇದು ಹೀಗೇ ಬೆಳೆದರೆ ಮುಂದೆ ಎಲ್ಲಿಗೆ ಬಂದು ನಿಲ್ಲುತ್ತೋ ಎಂದು ಆತಂಕವಾಯಿತು.

ಅವನ ಆತಂಕ ನಿಜವಾಯಿತು. ನಾಲ್ಕು ದಿನಕ್ಕೇ ಎಣ್ಣೆ ಸುಬ್ರಹ್ಮಣ್ಯ ಶೆಟ್ಟರ ಅಂಗಡಿಯಲ್ಲಿ